Test Paper : **I**

Test Subject : **GENERAL PAPER**

Test Subject Code : **K-0018**

Roll No. | | | | | | | | |

(Figures as per admission card)

OMR Sheet No. : ___________________

Test Booklet Code

**X**

**TEST BOOKLET SERIAL NO.**

**Name & Signature of Invigilator/s**

Signature : ________________________________

Name : ________________________________

Time : 1 Hour

Maximum Marks : 100

Number of Pages in this Booklet : **16**

Number of Questions in this Booklet : **50**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಐವತ್ತು (50) ಬಹು ಆಯ್ಕೆ ವಿಧದ ಪ್ರಶ್ನೆಗಳನ್ನೊಳಗೊಂಡಿದೆ.
3. ಪರೀಕ್ಷೆ ಪ್ರಾರಂಭವಾದಾಗ, ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ **ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.**
   (i) ಪ್ರಶ್ನೆಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು / ಪ್ರಶ್ನೆಗಳು ಕಾಣೆಯಾದ ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆಪುಸ್ತಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು, ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ, ಅಂಡಾಕೃತಿಯನ್ನು ಕಪ್ಪಾಗಿಸಬೇಕು.

   ಉದಾಹರಣೆ : (A) (B) ● (D)

   (C) ಸರಿಯಾದ ಉತ್ತರವಾಗಿದ್ದಾಗ.
5. ಈ ಪ್ರಶ್ನೆ ಪತ್ರಿಕೆಯ ಜೊತೆಯಲ್ಲಿ **ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು**. OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ. ಪ್ರಶ್ನೆಪುಸ್ತಿಕೆ Iರಲ್ಲಿ ಕೊಟ್ಟಿರುವ ಪುಸ್ತಿಕೆ ಸಂಕೇತವನ್ನು OMR ಹಾಳೆಯಲ್ಲಿ **ಕಡ್ಡಾಯವಾಗಿ** ನಮೂದಿಸಬೇಕು.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMRನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

**Instructions for the Candidates**

1. Write your roll number in the space provided on the top of this page.
2. This paper consists of fifty(50) multiple-choice type of questions.
3. At the commencement of examination, the question booklet will be given to you. In the first 5 minutes, you are requested **to open the booklet and compulsorily examine it as below** :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.


   **Example** : (A) (B) ● (D)

   where (C) is the correct response.
5. Your responses to the questions are to be indicated in the **OMR Sheet kept inside this Booklet**. If you mark at any place other than in the circles, the OMR Sheet will not be evaluated.
6. Read the instructions given in OMR carefully. Fill the Test Booklet Code of Paper I in OMR Sheet **Compulsorily**.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space provided for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

## ಜನರಲ್ ಪೇಪರ್

## ಪೇಪರ್ – I

ಕೆಳಗಿನ ಚಿತ್ರಣವನ್ನು ಮತ್ತು ದತ್ತಾಂಶವನ್ನು ಆಧರಿಸಿ ಪ್ರಶ್ನೆ **1** ರಿಂದ **5** ರವರೆಗೆ ಉತ್ತರಿಸಿ.




A = 30, ತರಗತಿಯಲ್ಲಿ ಭೌತಶಾಸ್ತ್ರ ಅಭ್ಯಾಸ ಮಾಡುತ್ತಿರುವ ಒಟ್ಟು ವಿದ್ಯಾರ್ಥಿಗಳನ್ನು ಪ್ರತಿನಿಧಿಸುತ್ತದೆ.

B = ?, ಒಟ್ಟು ರಸಾಯನಶಾಸ್ತ್ರ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳನ್ನು ಪ್ರತಿನಿಧಿಸುತ್ತದೆ.

C = 40, ಒಟ್ಟು ಗಣಿತಶಾಸ್ತ್ರದಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳನ್ನು ಪ್ರತಿನಿಧಿಸುತ್ತದೆ.

12 ವಿದ್ಯಾರ್ಥಿಗಳು ಗಣಿತಶಾಸ್ತ್ರವನ್ನು ಹೊರತುಪಡಿಸಿ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರವನ್ನು ಅಭ್ಯಸಿಸುತ್ತಾರೆ.

16 ವಿದ್ಯಾರ್ಥಿಗಳು ಭೌತಶಾಸ್ತ್ರವನ್ನು ಹೊರತುಪಡಿಸಿ, ರಸಾಯನಶಾಸ್ತ್ರ ಮತ್ತು ಗಣಿತಶಾಸ್ತ್ರವನ್ನು ಅಭ್ಯಸಿಸುತ್ತಾರೆ.

4 ವಿದ್ಯಾರ್ಥಿಗಳು ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತಶಾಸ್ತ್ರವನ್ನು ಅಭ್ಯಸಿಸುತ್ತಾರೆ.

**1.** ಯಾವುದೇ ವಿದ್ಯಾರ್ಥಿ ರಸಾಯನಶಾಸ್ತ್ರವನ್ನು ಮಾತ್ರ ಅಧ್ಯಯನ ಮಾಡದೆ, ಒಟ್ಟಾರೆ ಎಷ್ಟು ವಿದ್ಯಾರ್ಥಿಗಳು ರಸಾಯನಶಾಸ್ತ್ರವನ್ನು ಅಭ್ಯಸಿಸುತ್ತಾರೆ ?

(A) 30 (B) 28
(C) 32 (D) 34

**2.** 14 ವಿದ್ಯಾರ್ಥಿಗಳು ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರ ಹಾಗೂ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತಶಾಸ್ತ್ರ ಅಭ್ಯಸಿಸಿದರೆ, ಚಿತ್ರಣದಲ್ಲಿರುವ 'q' ನ ಮೌಲ್ಯವೇನು ?

(A) 6 (B) 5
(C) 10 (D) 4

**3.** ತರಗತಿಯಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

(A) 52 (B) 60
(C) 56 (D) 63

**4.** ಭೌತಶಾಸ್ತ್ರ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳ ಶೇಕಡಾವಾರು ಎಷ್ಟು ?

(A) 53% (B) 56%
(C) 60% (D) 40%

**5.** ಗಣಿತಶಾಸ್ತ್ರ ಮಾತ್ರ ಅಭ್ಯಸಿಸುತ್ತಿರುವವರ ಸಂಖ್ಯೆಗೆ ಹೋಲಿಸಿದರೆ ಭೌತಶಾಸ್ತ್ರ ಮಾತ್ರ ಅಭ್ಯಸಿಸುವವರ ಸಂಖ್ಯೆಯ ಅನುಪಾತವೇನು ?

(A) 0.3 (B) 0.4
(C) 0.5 (D) 0.6

ಕೆಳಗಿನ ವಾಕ್ಯವೃಂದವನ್ನು ಎಚ್ಚರಿಕೆಯಿಂದ ಓದಿ **6** ರಿಂದ **10**ರ ವರೆಗಿನ ಪ್ರಶ್ನೆಗಳನ್ನು ಉತ್ತರಿಸಿ :


**ಉತ್ತರ ವಸಾಹತುಶಾಹಿ ಮುಕ್ತಿ :**

ಬಿಳಿಯ ಮನುಷ್ಯನ ಹೊರೆಯು ಭೂಮಿಗೆ ಅದರಲ್ಲೂ ವಿಶೇಷವಾಗಿ ದಕ್ಷಿಣಕ್ಕೆ ಹೆಚ್ಚುತ್ತಿರುವ ಭಾರವಾಗುತ್ತಿದೆ. ಕಳೆದ 500 ವರ್ಷಗಳ ಇತಿಹಾಸ, ಪ್ರತಿ ಸಲ ಉತ್ತರ ಮತ್ತು ಪ್ರಕೃತಿ ಮತ್ತು ಉತ್ತರದ ಹೊರಗಿನ ಜನರ ನಡುವೆ ವಸಾಹತುಶಾಹಿ ಸಂಬಂಧ ಏರ್ಪಡುವುದು, ವಸಾಹತು ಸ್ಥಾಪಿಸುವ ವ್ಯಕ್ತಿಗಳು ಮತ್ತು ಸಮಾಜ ಶ್ರೇಷ್ಠತೆಯ ಸ್ಥಾನದಲ್ಲಿ ಇದ್ದೇವೆಂದು ಭಾವಿಸಿಕೊಳ್ಳುವುದು ಹಾಗೂ ಈ ರೀತಿಯಾಗಿ ಭೂಮಿಯ ಭವಿಷ್ಯ ಮತ್ತು ಇತರ ಜನ, ಸಂಸ್ಕೃತಿಗಳ ಹೊಣೆಗಾರರಾಗುವುದನ್ನು ಬಿಚ್ಚಿಡುತ್ತದೆ. ಈ ಶ್ರೇಷ್ಠತೆಯ ಊಹನೆಯೊಳಗಿನಿಂದಲೇ ಬಿಳಿ ಮನುಷ್ಯನ ಹೊರೆಯ ಕಲ್ಪನೆ ಕೂಡ ಪ್ರವಹಿಸುತ್ತದೆ. ಬಿಳಿ ಮನುಷ್ಯನು ಪ್ರಕೃತಿ, ಮಹಿಳೆ ಮತ್ತು ಇತರರ ಮೇಲೆ ಹೊರಿಸಿದ ಹೊರೆಗಳ ವಾಸ್ತವತೆಯ ಹರಿವು ಬಿಳಿ ಮನುಷ್ಯನ ಹೊರೆಯ ವಿಚಾರದಲ್ಲಿದೆ. ಆದ್ದರಿಂದ ದಕ್ಷಿಣವನ್ನು ವಸಾಹತು ಮುಕ್ತಗೊಳಿಸುವುದು ಉತ್ತರದ ವಸಾಹತುಮುಕ್ತಿ ಸಂಗತಿಯೊಡನೆ ನಿಕಟವಾಗಿ ಸಂಬಂಧಿಸಿದೆ.

# GENERAL PAPER

## Paper – I

Answer Questions from **1** to **5** based on the following data and with the help of the given figure.




A = 30, represents total number of students in class studying Physics.

B = ?, represents total number of students studying Chemistry.

C = 40, represents total number of students studying Mathematics.

12 Students are studying Physics and Chemistry but not Mathematics.

16 Students are studying Chemistry and Mathematics but not Physics.

4 Students are studying Physics, Chemistry and Mathematics.

**1.** If no student is studying Chemistry alone, what is the total number of students studying Chemistry ?

(A) 30 (B) 28

(C) 32 (D) 34

**2.** If students studying Physics and Mathematics, Physics, Chemistry and Mathematics are 14 in number, then what is the value of q ?

(A) 6 (B) 5

(C) 10 (D) 4

**3.** What is the total number of students in the class ?

(A) 52 (B) 60

(C) 56 (D) 63

**4.** What is the percentage of students studying Physics ?

(A) 53% (B) 56%

(C) 60% (D) 40%

**5.** What is the ratio of number of students studying only Physics to the number of students studying only Mathematics ?

(A) 0.3 (B) 0.4

(C) 0.5 (D) 0.6

Read the following passage carefully and answer the questions **6-10** :

### DECOLONIZING THE NORTH

The white man's burden is becoming increasingly heavy for the earth and especially for the South. The past 500 years of history reveal that each time a relationship of colonization has been established between the North and nature and people outside the North, the colonizing men and society have assumed a position of superiority, and thus of responsibility for the future of the earth and for other peoples and cultures. Out of the assumption of superiority flows the notion of the white man's burden. Out of the idea of the white man's burden flows the reality of the burdens imposed by the white man on nature, women and others. Therefore, decolonizing the South is intimately linked to the issue of decolonizing the North.

ಗಾಂಧೀಜಿಯವರು, ಜಗತ್ತಿನಲ್ಲಿ ತುಳಿತಕ್ಕೊಳಗಾದವರೆಲ್ಲ ಒಂದೇ ಎಂಬ ಅರ್ಥದಲ್ಲಿ ಮಾತ್ರವಲ್ಲದೆ ದಬ್ಬಾಳಿಕೆಗಾರ ಕೂಡ ಶೋಷಣೆಯ ಸಂಸ್ಕೃತಿಯ ಹಿಡಿತಕ್ಕೆ ಸಿಲುಕಿದ್ದಾನೆಂಬ ವಿಶಾಲ ಭಾವನೆಯಲ್ಲಿ ಸ್ವಾತಂತ್ರ್ಯದ ಪ್ರತ್ಯೇಕ ಅಸ್ತಿತ್ವವನ್ನು ಸ್ಪಷ್ಟವಾಗಿ ರೂಪಿಸಿದರು. ಸಂಪತ್ತು ಸೃಷ್ಟಿ ಪ್ರಕ್ರಿಯೆಗಳು ಏಕಕಾಲಕ್ಕೆ ಬಡತನವನ್ನು, ಜ್ಞಾನ ಸೃಷ್ಟಿಯ ಪ್ರಕ್ರಿಯೆಗಳು ಏಕಕಾಲಕ್ಕೆ ಅಜ್ಞಾನವನ್ನು ಮತ್ತು ಅದೇ ರೀತಿ ಸ್ವಾತಂತ್ರ್ಯ ಸೃಷ್ಟಿಯ ಪ್ರಕ್ರಿಯೆಗಳು ಏಕಕಾಲಕ್ಕೆ ಗುಲಾಮಗಿರಿಯನ್ನು ಹುಟ್ಟು ಹಾಕುತ್ತವೆ ಎಂಬ ಕಾರಣಕ್ಕೆ ಕೂಡ ಉತ್ತರದಲ್ಲಿ ವಸಾಹತು ಮುಕ್ತಗೊಳಿಸುವಿಕೆ ಮಹತ್ವದ್ದಾಗಿದೆ.

ವಸಾಹತುಶಾಹಿಯ ಮೊದಲ ಹಂತಗಳಲ್ಲಿ , ಜಗತ್ತಿನ ಬಿಳಿಯರಲ್ಲದ ಜನರನ್ನು 'ನಾಗರಿಕ' ರನ್ನಾಗಿಸುವ ಅಗತ್ಯತೆಯನ್ನು ಬಿಳಿ ಮನುಷ್ಯನ ಹೊರೆಯು ಒಳಗೊಂಡಿದೆ – ಇದರರ್ಥ ಎಲ್ಲಕ್ಕಿಂತ ಮೊದಲು, ಬಿಳಿಯರಲ್ಲದವರ ಸಂಪನ್ಮೂಲಗಳು ಮತ್ತು ಹಕ್ಕುಗಳಿಂದ ಅವರನ್ನು ವಂಚಿತರನ್ನಾಗಿಸುವುದೇ ಆಗಿರುತ್ತದೆ. ವಸಾಹತುಶಾಹಿಯ ನಂತರದ ಹಂತದಲ್ಲಿ, ಬಿಳಿ ಮನುಷ್ಯನ ಹೊರೆಯು ತೃತೀಯ ಜಗತ್ತನ್ನು "ಅಭಿವೃದ್ಧಿಪಡಿಸುವ" ಅವಶ್ಯಕತೆಯಿಂದ ಕೂಡಿದೆ, ಇದು ಪುನಃ ಸ್ಥಳೀಯ ಸಮುದಾಯಗಳನ್ನು ಅವರ ಸಂಪನ್ಮೂಲಗಳು ಮತ್ತು ಹಕ್ಕುಗಳಿಂದ ವಂಚಿತಗೊಳಿಸುವಲ್ಲಿ ತೊಡಗುತ್ತದೆ. ನಾವೀಗ ವಸಾಹತುಶಾಹಿಯ ಮೂರನೆಯ ಹಂತದ ಹೊಸ್ತಿಲಲ್ಲಿದ್ದು, ಇದರಲ್ಲಿ ಬಿಳಿ ಮನುಷ್ಯನ ಹೊರೆಯು ಪರಿಸರವನ್ನು ಅದರಲ್ಲೂ ವಿಶೇಷವಾಗಿ ತೃತೀಯ ಜಗತ್ತಿನ ಪರಿಸರವನ್ನು ಕಾಪಾಡುವುದು – ಮತ್ತು ಇದೂ ಕೂಡ ಹಕ್ಕುಗಳು ಮತ್ತು ಸಂಪನ್ಮೂಲಗಳ ನಿಯಂತ್ರಣ ಪಡೆಯುವುದನ್ನು ಒಳಗೊಂಡಿರುತ್ತದೆ. [...]

**ನೈತಿಕ ವಸಾಹತುಶಾಹಿ ಮುಕ್ತಿ**

ಎಲ್ಲ ಜನಜೀವನದ ಪ್ರಜಾಪ್ರಭುತ್ವದಿಂದ ಹಿಡಿದು ಪ್ರಕೃತಿಯ ಮೇಲೆ ಮಾನವನ ಅಧಿಪತ್ಯದವರೆಗೆ, ಹೆಚ್ಚಿನ ಪಾಶ್ಚಿಮಾತ್ಯವಲ್ಲದ ಸಂಸ್ಕೃತಿಗಳು ಎಲ್ಲ ಜೀವಗಳ ಪ್ರಜಾರಾಜ್ಯವನ್ನಾಧರಿಸಿವೆ. ಒಬ್ಬ ಶಾಲಾ ಬಾಲಕಿಯಾಗಿ ಹಿಂದಿ ತರಗತಿಯಲ್ಲಿ ನಾನು ಮಾನವ ಜಾತಿಯೆಲ್ಲವೂ ವಸುಧೈವ ಕುಟುಂಬಕಂ ಅಥವಾ ಭೂಮಿ ಕುಟುಂಬದ ಭಾಗವೆಂದು ಕಲಿತಿದ್ದೆ. ಭೂಮಿ ಕುಟುಂಬದ ಒಂದು ಭಾಗವಾಗಿ ಒಬ್ಬರು ಎಲ್ಲ ಜೀವಿಗಳ ಪ್ರಜಾಪ್ರಭುತ್ವದಲ್ಲಿ ಭಾಗವಹಿಸುತ್ತಾರೆ. ನಮ್ಮ ರಾಷ್ಟ್ರಕವಿ ರವೀಂದ್ರನಾಥ ಠಾಗೋರರು ರಚಿಸಿದ 'ಭಾರತದ ಸಂಸ್ಕೃತಿಯ ಉತ್ತುಂಗ'ದಲ್ಲಿ ನಿಸರ್ಗದಲ್ಲಿ ಜೀವನ ತತ್ವಗಳು ಸಾಂಸ್ಕೃತಿಕ ವಿಕಾಸದ ಅತ್ಯುಚ್ಚ ನಮೂನೆಯಾಗಿ ವ್ಯಾಖ್ಯಾನಿಸಲ್ಪಟ್ಟಿವೆ.

ಅರಣ್ಯ ಸಂಸ್ಕೃತಿಯು ಭಾರತೀಯ ಸಮಾಜದ ಸಂಸ್ಕೃತಿಯ ಉದ್ದೀಪಕವಾಗಿದೆ. ಯಾವಾಗಲೂ ಅರಣ್ಯದಲ್ಲಿ ನಡೆಯುವ ಪ್ರಭೇದದಿಂದ ಪ್ರಭೇದಕ್ಕೆ, ಋತುವಿನಿಂದ ಋತುವಿಗೆ, ದೃಶ್ಯ, ಶಬ್ದ ಮತ್ತು ವಾಸನೆಗಳೆಲ್ಲದರಲ್ಲೂ ಭಿನ್ನವಾಗುವ ಜೀವನದ ನವೀಕರಣದ ವೈವಿಧ್ಯಮಯ ಪ್ರಕ್ರಿಯೆಗಳೇ ಕೂಡಿದ ಅರಣ್ಯದಿಂದ ಉತ್ಪನ್ನಗೊಂಡ ಸಂಸ್ಕೃತಿಯು ಪ್ರಭಾವಿತವಾಗಿದೆ. ಪ್ರಜಾಪ್ರಭುತ್ವದ ಬಹುಸಾಂಸ್ಕೃತಿಕತೆಯ ವಿವಿಧತೆಯಲ್ಲಿ ಏಕತೆ ಕಾಣುವ ಜೀವನ ತತ್ವ ಈ ರೀತಿಯಾಗಿ ಭಾರತೀಯ ನಾಗರಿಕತೆಯ ತತ್ವವಾಗಿದೆ.

ಜೀವನದ ಮೂಲವಾಗಿ, ಪ್ರಕೃತಿಯು ಪವಿತ್ರವೆಂದು ಪೂಜಿಸಲ್ಪಡುತ್ತಿತ್ತು ಮತ್ತು ಮಾನವ ವಿಕಾಸವು, ಸಾಮರಸ್ಯದಲ್ಲಿ ತನ್ನ ಲಯ ಮತ್ತು ನಮೂನೆಗಳೊಂದಿಗೆ, ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಸಂವಹನ ನಡೆಸಬಲ್ಲ ಶಕ್ತತೆಯ ರೂಪದಲ್ಲಿ ಮಾಪನಗೊಳ್ಳುತ್ತಿತ್ತು . ಅಂತಿಮ ವಿಶ್ಲೇಷಣೆಯಲ್ಲಿ ಪರಿಸರ ವಿಜ್ಞಾನದ ವಿಷಮ ಸ್ಥಿತಿ ಮಾನವ ಜಾತಿಯು ನಿಸರ್ಗ ಜೀವನದ ಪ್ರಜಾಪ್ರಭುತ್ವದ ಭಾಗವಲ್ಲ , ಅವರು ನಿಸರ್ಗಕ್ಕೆ ಹೊರತುಪಟ್ಟು ಪ್ರಕೃತಿಗಿಂತ ಮೇಲೆ ನಿಲ್ಲುತ್ತಾರೆಂಬ ತಪ್ಪು ಗ್ರಹಿಕೆ (ವಿಶ್ವಾಸ)ಯ ಮೂಲದಲ್ಲಿದೆ.

**6.** ಬಿಳಿ ಮನುಷ್ಯನ ಹೊರೆಯು ಇದನ್ನು ಆಧರಿಸಿದೆ

(A) ಯೂರೋಪ್‌ನಿಂದ ಮಾಡಲ್ಪಟ್ಟ ನೈಜ ಪ್ರಗತಿ

(B) ಶ್ರೇಷ್ಠ ತಂತ್ರಜ್ಞಾನ

(C) ಶ್ರೇಷ್ಠತೆಯ ತಪ್ಪು ಕಲ್ಪನೆ

(D) ಯೂರೋಪಿಯನ್ ಸಮಾಜಗಳ ಪ್ರಜಾಪ್ರಭುತ್ವ ಗುಣ

**7.** ಈ ಪ್ಯಾಸೇಜ್‌ನಲ್ಲಿ 'ಉತ್ತರ' ಉಲ್ಲೇಖಿಸುವುದು

(A) ಸಮಭಾಜಕ ರೇಖೆಗಿಂತ ಮೇಲಿರುವ ಎಲ್ಲ ರಾಷ್ಟ್ರಗಳು

(B) ಸ್ಕ್ಯಾಂಡಿನೇವಿಯನ್ ರಾಷ್ಟ್ರಗಳು ಮಾತ್ರ

(C) ಸಾಮ್ರಾಜ್ಯಶಾಹಿ ಯೂರೋಪಿಯನ್ ರಾಷ್ಟ್ರಗಳು

(D) ಉನ್ನತ ನಾಗರಿಕತೆ ಹೊಂದಿದ ದೇಶಗಳು

Gandhi clearly formulated the individuality of freedom not only in the sense that the oppressed of the world are one, but also in the wider sense that the oppressor too, is caught in the culture of oppression. Decolonization in the North is also essential because processes of wealth creation simultaneously create poverty, processes of knowledge creation simultaneously generate ignorance, and processes for the creation of freedom simultaneously generate unfreedom.

In the early phases of colonization, the white man's burden consisted of the need to 'civilize' the non-white peoples of the world — this meant, above all, depriving them of their resources and rights. In the later phase of colonization, the white man's burden consisted of the need to 'develop' the third world, and this again involved depriving local communities of their resources and rights. We are now on the threshold of the third phase of colonization, in which the white man's burden is to protect the environment, especially the third world's environment – and this, too, involves taking control of rights and resources. [. . .]

**Ethical decolonization :**

From the democracy of all life to man's empire over nature, most non-western cultures have been based on the democracy of all life. As a schoolgirl, one lesson I learnt in the Hindi class was that human beings are part of Vasudhaiva Kutumbakam or the earth family. As a part of the earth family, one participates in the democracy of all life. Rabindranath Tagore, our national poet, wrote that the peak of Indian culture consists in its having defined the principles of life in nature as the highest form of cultural evolution.

The culture of the forest has fuelled the culture of Indian society. The culture that has arisen from the forest has been influenced by the diverse processes of renewal of life which are always at play in the forest, varying from species to species, from season to season, in sight and sound and smell. The unifying principle of life in diversity, of democratic pluralism, thus became the principle of Indian civilization.

As a source of life, nature was venerated as sacred, and human evolution was measured in terms of the human capacity to interact in harmony with her rhythms and patterns, intellectually and emotionally. In the final analyses, the ecological crisis is rooted in the mistaken belief that human beings are not part of the democracy of nature's life, that they stand apart from and above nature.

**6.** White man's burden is based on

(A) Real progress made by Europe

(B) Superior technology

(C) False notion of superiority

(D) Democratic nature of European Societies

**7.** In the passage North refers to

(A) all countries above the equator

(B) only Scandinavian countries

(C) imperialist European countries

(D) highly civilized countries

**8.** ತೃತೀಯ ಜಗತ್ತಿನ ವಾತಾವರಣ ಕಾಪಾಡಲು ಪಶ್ಚಿಮದ ಪ್ರಯತ್ನವನ್ನು ಲೇಖಕರು ಹೀಗೆಂದು ವಾದಿಸುತ್ತಾರೆ

(A) ದಿನದ ಅಗತ್ಯ

(B) ಒಂದು ಐತಿಹಾಸಿಕ ಕಡ್ಡಾಯ

(C) ತೃತೀಯ ಜಗತ್ತಿಗೆ ತೊಂದರೆದಾಯಕ

(D) ಒಂದು ನೈತಿಕ ಕರ್ತವ್ಯ

**9.** ಭಾರತೀಯ ನಾಗರಿಕತೆಗೆ ಯಾವುದು ಮಹತ್ತರವೆಂದು ಲೇಖಕರ ದೃಷ್ಟಿಕೋನವಾಗಿದೆ ?

(A) ಧಾರ್ಮಿಕ ವರ್ತನೆ

(B) ಇತರರ ಬಗ್ಗೆ ಸಹಾನುಭೂತಿ

(C) ಪ್ರಜಾಪ್ರಭುತ್ವದ ಬಹುತ್ವ

(D) ಭೋಗವಾದ

**10.** ದಕ್ಷಿಣವನ್ನು ವಸಾಹತು ಮುಕ್ತಗೊಳಿಸುವಿಕೆಗೆ

(A) ಉತ್ತರದ ಸಂಪನ್ಮೂಲಗಳು ಅವಶ್ಯಕ

(B) ಉತ್ತರದ ವಸಾಹತು ಮುಕ್ತಗೊಳಿಸುವಿಕೆ ಅಗತ್ಯ

(C) ಉತ್ತರ ಮತ್ತು ದಕ್ಷಿಣಗಳ ನಡುವೆ ಸಂಪೂರ್ಣ ಪ್ರತ್ಯೇಕತೆ

(D) ಪಾಶ್ಚಿಮಾತ್ಯ ತಂತ್ರಜ್ಞಾನ

**11.** 'ಕ್ಯೋಟೋ ಶಿಷ್ಟಾಚಾರ ಸಂಹಿತೆ' ಇದಕ್ಕೆ ಸಂಬಂಧಿಸಿದೆ

(A) ಓಝೋನ್ ಸವಕಳಿ

(B) ಅಪಾಯಕಾರಿ ತ್ಯಾಜ್ಯ

(C) ಹವಾಮಾನ ಬದಲಾವಣೆ

(D) ನ್ಯೂಕ್ಲಿಯರ್ (ಪರಮಾಣು) ಶಕ್ತಿ

**12.** ಭಾರತದ ಪ್ರಥಮ ಕಾರ್ಯತಃ ವಿಶ್ವವಿದ್ಯಾನಿಲಯ ಅಥವಾ ವಾಸ್ತವ ವಿಶ್ವವಿದ್ಯಾನಿಲಯ ಕಾರ್ಯಾಚರಣೆಗೊಂಡ ರಾಜ್ಯ

(A) ಕೇರಳ

(B) ಆಂಧ್ರ ಪ್ರದೇಶ

(C) ಕರ್ನಾಟಕ

(D) ತಮಿಳುನಾಡು

**13.** ಮೈಸೂರಿನಲ್ಲಿ 103ನೆಯ ಭಾರತೀಯ ವಿಜ್ಞಾನ ಕಾಂಗ್ರೆಸ್ ಅನ್ನು ಉದ್ಘಾಟಿಸಿದವರು ಯಾರು ?

(A) ಪ್ರಣವ್ ಮುಖರ್ಜಿ

(B) ಹಮೀದ್ ಅನ್ಸಾರಿ

(C) ನರೇಂದ್ರ ಮೋದಿ

(D) ಶ್ರೀಮತಿ ಸ್ಮೃತಿ ಇರಾನಿ

**14.** ಭೌತಿಕ ಮಾರ್ಗ ಮಾಹಿತಿ ಪ್ರಸರಣ ಸಂಭವಿಸುವುದಕ್ಕೆ

(A) ಎನ್ಕೋಡರ್ (B) ಡಿಕೋಡರ್

(C) ಚಾನೆಲ್ (D) ಬ್ಯಾಂಡ್ವಿಡ್ತ್

**15.** MIPS ಎಂದರೆ

(A) ಮಿಲಿಯನ್ ಇನ್‌ಸ್ಟ್ರಕ್ಷನ್ ಪರ್ ಸೆಕೆಂಡ್ (ಮಿಲಿಯನ್ ಸೂಚನೆಗಳು ಒಂದು ಸೆಕೆಂಡಿಗೆ)

(B) ಮೆಗಾ ಇನ್‌ಸ್ಟ್ರಕ್ಷನ್ ಪರ್ ಸೆಕೆಂಡ್(ಮೆಗಾ ಸೂಚನೆಗಳು ಒಂದು ಸೆಕೆಂಡಿಗೆ)

(C) ಮಿಲಿಯನ್ ಇಂಟರ್‌ಚೇಂಜ್ ಪರ್‌ಫಾರ್ಮೆನ್ಸ್ ಸ್ಟ್ಯಾಂಡರ್ಡ್ (ಮಿಲಿಯನ್ ಇಂಟರ್‌ಚೇಂಜ್ ಕಾರ್ಯಕ್ಷಮತೆಯ ಮಾನದಂಡ)

(D) ಮೆಗಾಬೈಟ್ ಇನ್‌ಸ್ಟ್ರಕ್ಷನ್ ಪರ್‌ಫಾರ್ಮೆನ್ಸ್ ಸ್ಟ್ಯಾಂಡರ್ಡ್ (ಮೆಗಾಬೈಟ್ ಸೂಚನೆಯ ನಿರ್ವಹಣೆ ಮಾನದಂಡ)

**16.** ಧ್ವನಿ ಮತ್ತು ಕಂಪ್ಯೂಟರ್ ಡೇಟಾ ನಿರ್ವಹಿಸಲು ಗುಣಮಟ್ಟಗಳಿರುವಂತೆ, ಹೆಚ್ಚುವರಿ ದೂರವಾಣಿ ಸಾಮರ್ಥ್ಯಗಳನ್ನು ಒದಗಿಸುತ್ತದೆ ತಾಮ್ರದ ದೂರವಾಣಿ ಮಾರ್ಗಗಳನ್ನು ನಾಶಮಾಡದೆ, ಇದನ್ನು ಕರೆಯುತ್ತಾರೆ

(A) ಇಂಟರ್ನೆಟ್ ಸೇವೆಯನ್ನು ಒದಗಿಸುವವರು

(B) ಇಂಟರ್ನೆಟ್ ಪ್ರೊಟೋಕಾಲ್ ನೆಟ್ವರ್ಕ್

(C) ಇಂಟೆಗ್ರೇಟೆಡ್ ಸೇವೆ ಒದಗಿಸುವವರು

(D) ಇಂಟೆಗ್ರೇಟೆಡ್ ಸೇವೆಯ ಡಿಜಿಟಲ್ ನೆಟ್ವರ್ಕ್

**8.** The author argues that the attempt by the West to protect the third World's environment is

(A) the need of the day

(B) a historical compulsion

(C) harmful to the third world

(D) an ethical duty

**9.** What is the author's view is essential to Indian civilization ?

(A) Religious attitude

(B) Compassion for others

(C) Democratic pluralism

(D) Hedonism

**10.** Decolonising the South

(A) Requires the resources of the North

(B) Requires the decolonisation of the North

(C) Total separation between North and South

(D) Western Technology

**11.** 'Kyoto protocol' is related to

(A) Ozone depletion

(B) Hazardous waste

(C) Climate change

(D) Nuclear energy

**12.** The first 'Virtual University' of India came up in

(A) Kerala

(B) Andhra Pradesh

(C) Karnataka

(D) Tamil Nadu

**13.** Who inaugurated the 103rd Indian Science Congress at Mysore ?

(A) Pranab Mukharjee

(B) Hamid Ansari

(C) Narendra Modi

(D) Mrs. Smriti Irani

**14.** Physical path along which data transmission occurs

(A) Encoder (B) Decoder

(C) Channel (D) Bandwidth

**15.** MIPS stands for

(A) Million Instruction Per Second

(B) Mega Instruction Per Second

(C) Million Interchange Performance Standard

(D) Megabyte Instruction Performance Standard

**16.** A set of standards to handle voice and computer data in telephone networks, providing additional telephone capabilities without scrapping existing copper telephone lines is called

(A) Internet Service Provider

(B) Internet Protocol Network

(C) Integrated Service Provider

(D) Integrated Service Digital Network

**17.** ಹಾರು ಬೂದಿ ಎಂದರೆ

(A) ಕೈಗಾರಿಕೆಗಳಲ್ಲಿ ಉತ್ಪತ್ತಿಯಾಗುವ ಬೂದಿ

(B) ಸಿಮೆಂಟ್ ಉದ್ಯಮಗಳಲ್ಲಿ ಉತ್ಪಾದನೆಯಾಗುವ ಧೂಳು

(C) ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಉತ್ಪತ್ತಿಯಾಗುವುದು

(D) ಪ್ಲಾಸ್ಟಿಕ್ ಸುಟ್ಟಾಗ ಉತ್ಪಾದಿಸಲ್ಪಡುವ ಹೊಗೆ

**18.** ಅರಣ್ಯ ನೀತಿ 'ಕಾಳಜಿ ವಹಿಸು ಮತ್ತು ಹಂಚಿಕೊ' ಇದಕ್ಕೆ ಅನ್ವಯಿಸುತ್ತದೆ

(A) ಬುಡಕಟ್ಟು ಜನ

(B) ಅರಣ್ಯ ಸಮುದಾಯಗಳು (ಅರಣ್ಯ ವಾಸಿಗಳು)

(C) ಹಳ್ಳಿಗರು

(D) ಜೆಎಫ್‌ಎಂಸಿಗಳು (JFMCs)

**19.** ಈ ಪರಿಸರ ವ್ಯವಸ್ಥೆಯು ಭೂಮಿಯ ಮತ್ತು ಸಮುದ್ರದ ಪರಿಸರ ವ್ಯವಸ್ಥೆಗಳ ನಡುವಿನ ವ್ಯವಸ್ಥಿತ ಸಂಪರ್ಕವನ್ನು ರಚಿಸುತ್ತದೆ

(A) ಮಾವಿನ ಕಾಡುಗಳು

(B) ಮ್ಯಾಂಗ್ರೋವ್ ಕಾಡುಗಳು

(C) ನಿತ್ಯಹರಿದ್ವರ್ಣ ಕಾಡುಗಳು

(D) ಮಳೆ ಕಾಡುಗಳು

**20.** ವಿದೇಶೀ ವಿಶ್ವವಿದ್ಯಾಲಯಗಳಿಂದ ಪ್ರದಾನಿಸಲ್ಪಟ್ಟ ಪದವಿಗಳಿಗೆ ಸಮಾನತೆ ಅನುಮತಿಸುವ ನೋಡಲ್ ಏಜೆನ್ಸಿ ಯಾವುದು

(A) ಯುಜಿಸಿ (UGC)

(B) ನೀತಿ ಆಯೋಗ

(C) ಐಸಿಎಸ್‌ಎಸ್‌ಆರ್ (ICSSR)

(D) ಎಐಯು (AIU)

**21.** ಇವುಗಳಲ್ಲಿ ಯಾವುದನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಸರಕಾರವು ವಿದ್ಯಾಲಕ್ಷ್ಮಿ ವೆಬ್ ಪೋರ್ಟಲ್ ಆರಂಭಗೊಳಿಸಿದೆ ?

(A) ಉನ್ನತ ಶಿಕ್ಷಣ

(B) ಶಿಕ್ಷಕ ಶಿಕ್ಷಣ

(C) ಶೈಕ್ಷಣಿಕ ಸಾಲಗಳು

(D) ಸ್ಕಾಲರ್‌ಶಿಪ್‌ಗಳು (ವಿದ್ಯಾರ್ಥಿವೇತನಗಳು)

**22.** ಈ ಕೆಳಗಿನವುಗಳಲ್ಲಿ ಯಾವ ವಿಶ್ವವಿದ್ಯಾಲಯ ಮೆಟಾ 'ಯುನಿವರ್ಸಿಟಿ ಪರಿಕಲ್ಪನೆಯನ್ನು ಅಳವಡಿಸಿಕೊಂಡಿದೆ ?

(A) ಅಸ್ಸಾಂ ವಿಶ್ವವಿದ್ಯಾಲಯ

(B) ಪಾಂಡಿಚೇರಿ ವಿಶ್ವವಿದ್ಯಾಲಯ

(C) ದೆಹಲಿ ವಿಶ್ವವಿದ್ಯಾಲಯ

(D) ಹೈದರಾಬಾದ್ ವಿಶ್ವವಿದ್ಯಾಲಯ

**23.** ತಂತ್ರಾಂಶ ಮತ್ತು ಯಂತ್ರಾಂಶ ಸಂಯೋಜನೆಯ ಎರಡು ಭಾಗಗಳ ಒಂದೇ LAN ಸಂಪರ್ಕಿಸುವ ಅಥವಾ ಎರಡು ಹೊಂದಬಲ್ಲ LANಗಳು ಸಂದೇಶಗಳನ್ನು ನಿರ್ದೇಶಿಸುವುದು ಸರಿಯಾದ ನೋಡ್‌ಗಳಿಗೆ ಕರೆಯಲಾಗುತ್ತದೆ

(A) ಅಂತರ್ಗತ ವ್ಯವಸ್ಥೆಗಳು

(B) ರೂಟರ್

(C) ಹೈಬ್ರಿಡ್ ಕಂಪ್ಯೂಟರ್

(D) ಮೈಕ್ರೊಪ್ರೊಸೆಸರ್

**24.** ಒಂದು ತಂತ್ರಾಂಶದಲ್ಲಿರುವ ನ್ಯೂನತೆಗಳನ್ನು ಹುಡುಕುವ ಒಂದು ಪ್ರಕ್ರಿಯೆ

(A) ಕಂಪೈಲಿಂಗ್

(B) ಪರೀಕ್ಷಿಸುವುದು

(C) ಅನುಷ್ಠಾನ ಮಾಡುವುದು

(D) ದೋಷ ನಿವಾರಣೆ

**17.** Flyash means

(A) Ash that is generated in industries

(B) Dust produced by cement industries

(C) Produced by thermal power plants

(D) The smoke that is generated when plastic is burnt

**18.** 'Care and share' policy of the forest applies to

(A) Tribal people

(B) Forest communities

(C) Villagers

(D) JFMCs

**19.** This ecosystem constitutes a systematic link between terrestrial and marine ecosystems

(A) Mango forests

(B) Mangrove forests

(C) Evergreen forests

(D) Rain forests

**20.** Which is a nodal agency for granting equivalence to degrees awarded by foreign universities ?

(A) UGC

(B) Niti Aayog

(C) ICSSR

(D) AIU

**21.** Vidyalakshmi is a web portal launched by the government for the benefit of students seeking

(A) Higher education

(B) Teacher education

(C) Educational loans

(D) Scholarships

**22.** Which of the following University has adopted the meta University concept ?

(A) Assam University

(B) Pondicherry University

(C) Delhi University

(D) Hydrabad University

**23.** A combination of hardware and software which links two parts of the same LAN or two compatible LANs by directing messages to the correct node is called

(A) Embedded System

(B) Router

(C) Hybrid Computer

(D) Microprocessor

**24.** __________ is a process of searching bugs in a software.

(A) Compiling

(B) Testing

(C) Execution

(D) Debugging

**25.** ಹುಲಿ ಯೋಜನೆ ಆರಂಭಗೊಂಡ ವರ್ಷ

(A) 1983

(B) 1993

(C) 1973

(D) 2000

**26.** ಭಾರತದಲ್ಲಿ ಮೊಟ್ಟಮೊದಲ ಎಫ್‌ಎಂ ಕೇಂದ್ರ ಸ್ಥಾಪನೆಯಾದುದು

(A) ಜುಲೈ 23, 1977

(B) ಜುಲೈ 23, 1997

(C) ಜುಲೈ 23, 2007

(D) ಜುಲೈ 23, 1987

**27.** ಇಎಸ್‌ಡಿ, ಎನ್‌ಎಸ್‌ಡಿ, ಡಿಡಿ, ಡಿಸಿಡಿಗಳಿಗೆ ಸಮಾನವಾದ ಒಂದು ಅಂಶವೆಂದರೆ

(A) ಪ್ರೇಕ್ಷಕವರ್ಗ

(B) ಮಾಲೀಕತ್ವ

(C) ಓದುಗರವರ್ಗ

(D) ನಾಯಕತ್ವ

**28.** ಭಾರತದಲ್ಲಿ ಸರ್ಕಾರದ ನೀತಿ ಹಾಗೂ ಮಾಹಿತಿಗಳನ್ನು ಮಾಧ್ಯಮಗಳಿಗೆ ವಿತರಿಸುವ ಕೇಂದ್ರ ಸರ್ಕಾರದ ಸಂಸ್ಥೆ ಯಾವುದು ?

(A) PIB (B) PTI

(C) AIR (D) PCI

**29.** ಈ ಕೆಳಗಿನ ಯಾವ ಪತ್ರಿಕೆಯ ಪ್ರಕಾಶಕರು ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯನ್ನು ಪ್ರಕಟಿಸುತ್ತಾರೆ ?

(A) ಟೈಮ್ಸ್ ಆಫ್ ಇಂಡಿಯಾ

(B) ದಿ ವೀಕ್

(C) ದಿ ಹಿಂದೂ

(D) ಯೋಜನ

**30.** ವ್ಯಾಪಾರ ಸಂವಹನದ AIDA ಮಾದರಿ ಏನನ್ನು ವಿವರಿಸುತ್ತದೆ ?

(A) ಅಟ್ರ್ಯಾಕ್ಷನ್ – ಇನ್‌ಫಾರ್ಮೇಷನ್ – ಡೆವೆಲಪ್‌ಮೆಂಟ್ – ಅಪ್ಲಿಕೇಶನ್ (ಆಕರ್ಷಣೆ – ಮಾಹಿತಿ – ಅಭಿವೃದ್ಧಿ – ಪ್ರಯೋಗಿಸುವುದು)

(B) ಅಟೆನ್ಷನ್ – ಇನ್‌ಫಾರ್ಮೇಷನ್ – ಡೈಲಾಗ್ – ಆ್ಯಕ್ಷನ್ (ಗಮನಿಸು – ಮಾಹಿತಿ – ಸಂವಾದ – ಕ್ರಿಯೆ)

(C) ಅಟೆನ್ಷನ್ – ಇಂಟರೆಸ್ಟ್ – ಡಿಸೈರ್ – ಆ್ಯಕ್ಷನ್ (ಗಮನಿಸು – ಆಸಕ್ತಿ – ಆಸೆ – ಕ್ರಿಯೆ)

(D) ಆ್ಯಟಿಟ್ಯೂಡ್ – ಇನ್‌ಸ್ಪಿರೇಷನ್ – ಡಿಸೈರ್ – ಆ್ಯಕ್ಷನ್ (ಮನೋಭಾವ – ಉತ್ತೇಜನ – ಆಸೆ – ಕ್ರಿಯೆ)

**31.** ಈ ಕೆಳಗಿನ ಪ್ರಶ್ನೆಯಲ್ಲಿ, ಎರಡು ವಾದಗಳನ್ನು ಕೊಡಲಾಗಿದೆ (i) ಮತ್ತು (ii). ಯಾವ ವಾದ "ಪ್ರಬಲ"ವಾಗಿದೆ ಮತ್ತು ಯಾವ ವಾದ "ದುರ್ಬಲ"ವಾಗಿದೆ ಎಂದು ನಿರ್ಧರಿಸಿ, ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

**ಹೇಳಿಕೆ :** ಭಾರತ ಚುನಾವಣೆಗಳಲ್ಲಿ ಮತದಾನ ಪ್ರತಿ ಅರ್ಹ ನಾಗರಿಕನಿಗೆ ಕಡ್ಡಾಯ ಮಾಡಬೇಕು.

**ವಾದಗಳು :**

i. ಹೌದು, ಭಾರತವು ಚುನಾವಣೆಗಳಲ್ಲಿ ತುಂಬಾ ವೆಚ್ಚ ಮಾಡಿರುತ್ತದೆ, ಇದು ಭಾರತದ ಸಂದರ್ಭದಲ್ಲಿ ಬಹಳ ಮುಖ್ಯ ಮತ್ತು ಎಲ್ಲರೂ ಮತದಾನ ಮಾಡಬೇಕು, ಭಾರತವನ್ನು ನಿಜವಾದ ಪ್ರಜಾಪ್ರಭುತ್ವದ ದೇಶ ಮಾಡಲು.

ii. ಇಲ್ಲ, ಈ ಕ್ಷಣದಲ್ಲಿ ವಿಷಯಗಳನ್ನು ಕಡ್ಡಾಯ ಮಾಡಿದರೆ ಇದು ಕಾರ್ಯದಕ್ಷತೆ ಪಡೆಯುವ ರೀತಿ ನಿಜವಾದ ಪ್ರಜಾಪ್ರಭುತ್ವತೆ ಅಲ್ಲ.

(A) ಕೇವಲ ವಾದ (i) ಪ್ರಬಲವಾಗಿದೆ

(B) ಕೇವಲ ವಾದ (ii) ಪ್ರಬಲವಾಗಿದೆ

(C) ವಾದ (i) ಅಥವಾ ವಾದ (ii) ಪ್ರಬಲವಾಗಿಲ್ಲ

(D) ಎರಡೂ ವಾದಗಳು ಪ್ರಬಲವಾಗಿವೆ

**25.** Project Tiger was launched in the year

(A) 1983

(B) 1993

(C) 1973

(D) 2000

**26.** The first ever FM services were started in India on

(A) July 23, 1977

(B) July 23, 1997

(C) July 23, 2007

(D) July 23, 1987

**27.** ESD, NSD, DD, DCD has one thing in common. What is it ?

(A) Viewership

(B) Ownership

(C) Readership

(D) Leadership

**28.** Which is the agency of the Central Government that disseminates information regarding government policies and projects to the media in India ?

(A) PIB (B) PTI

(C) AIR (D) PCI

**29.** 'Employment News' is published by the publisher of

(A) Times of India

(B) The Week

(C) The Hindu

(D) Yojana

**30.** What is AIDA Marketing Communication stands for ?

(A) Attraction – Information – Development – Application

(B) Attention – Information – Dialogue – Action

(C) Attention – Interest – Desire – Action

(D) Attitude – Inspiration – Desire – Action

**31.** The question below is followed by two arguments (i) and (ii). Decide which of the arguments is "strong" and which is "weak". Choose the correct answer from the given below.

**Statement** : India should make voting in elections compulsory for every eligible citizen.

**Arguments** :

i. Yes, because India spends a lot on elections, which is very important in the Indian context and everyone should vote to make India a true Democracy.

ii. No, because the moment you make things compulsory it is not a truly democratic way of getting things done.

(A) Only the argument (i) is strong

(B) Only the argument (ii) is strong

(C) Neither argument (i) nor argument (ii) is strong

(D) Both the arguments are strong

**32.** ಈ ಕೆಳಗಿನ ಪ್ರಶ್ನೆಯಲ್ಲಿ ಒಂದು ಹೇಳಿಕೆಗೆ ಎರಡು ಊಹೆಗಳಿವೆ(i) ಮತ್ತು(ii). ಊಹೆಯೆಂದರೆ ಏನಾದರೂ ಆಗಿರಬೇಕೆಂದುಕೊಳ್ಳುವುದು ಅಥವಾ ಭಾವಿಸುವುದು. ಈ ಕೆಳಗಿನ ಹೇಳಿಕೆ ಮತ್ತು ಊಹೆಗಳನ್ನು ನೋಡಿ, ಯಾವ ಊಹೆ, ಹೇಳಿಕೆಯಲ್ಲಿ ಸೂಚ್ಯವಾಗಿದೆಯೆಂದು ತಿಳಿಸಿ.

**ಹೇಳಿಕೆ** : ಈ ಋತುವಿನ ಉದ್ದಕ್ಕೂ ಮಳೆ ಬರದಿದ್ದರೆ ಎಲ್ಲಾ ರೈತರು ಈ ವರ್ಷ ತೊಂದರೆಗೊಳ್ಳುತ್ತಾರೆ.

**ಊಹೆಗಳು** :

i. ಎಲ್ಲಾ ರೈತರು ಸಾಮಾನ್ಯವಾಗಿ ಮಳೆ ಅವಲಂಬಿತರು.

ii. ಸಕಾಲಿಕ ಮಳೆ ಕೃಷಿಗೆ ಅಗತ್ಯವಾಗಿದೆ.

(A) ಕೇವಲ ಊಹೆ (i) ಮಾತ್ರ ಸೂಚ್ಯವಾಗಿದೆ

(B) ಕೇವಲ ಊಹೆ (ii) ಮಾತ್ರ ಸೂಚ್ಯವಾಗಿದೆ

(C) ಊಹೆ (i) ಅಥವಾ (ii) ಸಹ ಸೂಚ್ಯವಾಗಿಲ್ಲ

(D) ಎರಡೂ ಊಹೆಗಳು ಸೂಚ್ಯವಾಗಿವೆ

**33.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

1. ಎಲ್ಲಾ ಸಮಕಾಲೀನರು ಪೂರ್ವಿಕರು.
2. ಕೆಲವು ಪೂರ್ವಜರು ಉತ್ತರಾಧಿಕಾರಿಗಳು.
3. ಯಾವುದೇ ಸಮಕಾಲೀನರು ಉತ್ತರಾಧಿಕಾರಿಗಳಲ್ಲ.

ಈ ಕೆಳಗಿನ ಯಾವ ತೀರ್ಮಾನವನ್ನು ಮೇಲಿನ ಹೇಳಿಕೆಗಳಿಂದ ಪಡೆಯಬಹುದು ?

(A) ಕೆಲವು ಸಮಕಾಲೀನರು ಉತ್ತರಾಧಿಕಾರಿಗಳು

(B) ಕೆಲವು ಉತ್ತರಾಧಿಕಾರಿಗಳು ಪೂರ್ವಿಕರು

(C) ಯಾವುದೇ ಪೂರ್ವಿಕರು ಸಮಕಾಲೀನರಲ್ಲ

(D) ಯಾವುದೇ ಉತ್ತರಾಧಿಕಾರಿಗಳು ಪೂರ್ವಿಕರಲ್ಲ

**34.** ಮೇಲ್ತುದಿಯಲ್ಲಿ ಕೊಟ್ಟ ಜೋಡಿ ಪದಗಳಿಗಿರುವ ಸಂಬಂಧವನ್ನೇ ಹೊಂದಿದ ಪದಗಳ ಜೋಡಿಯನ್ನು ಆರಿಸಿ.

ಜೀವನಚರಿತ್ರೆ : ಆತ್ಮಚರಿತ್ರೆ : : ?

(A) ನೆನಪು : ಇತಿಹಾಸ

(B) ಲೇಖಕ : ಸಾಧಕ

(C) ಮೊಬೈಲ್ : ವಾಹನ

(D) ಪುರಾವೆ : ತಪ್ಪೊಪ್ಪಿಗೆ

**35.** ಈ ಕೆಳಗಿನ ನಾಲ್ಕು A – D ಪದಗಳಲ್ಲಿ ಒಂದು ಭಿನ್ನವಾಗಿದೆ. ಅದು ಯಾವುದೆಂದು ಗುರುತಿಸಿ.

(A) ಶೆಹನಾಯ್ (B) ಕೊಳಲು

(C) ಕಹಳೆ (D) ಪಿಟೀಲು

**36.** A, B ಮತ್ತು C ಒಂದು ಕೆಲಸವನ್ನು ಒಟ್ಟಾಗಿ 10 ದಿನಗಳಲ್ಲಿ ಮಾಡಬಹುದು. ಅವರು ಮೂರು ಜನ ಒಟ್ಟಾಗಿ ಕೆಲಸ ಮಾಡಲು ಶುರು ಮಾಡಿದರು. ಆದರೆ 4 ದಿನಗಳ ನಂತರ 'A' ಕೆಲಸದಿಂದ ಹೊರ ನಡೆದನು. ತದನಂತರ B ಮತ್ತು C ಒಟ್ಟಾಗಿ 10 ದಿನಗಳಲ್ಲಿ ಕೆಲಸ ಮುಗಿಸಿದರು. ಈಗ 'A' ಒಬ್ಬನೆ ಎಷ್ಟು ದಿನಗಳಲ್ಲಿ ಈ ಕೆಲಸವನ್ನು ಮಾಡಬಲ್ಲನು ?

(A) 15 ದಿನಗಳು (B) 16 ದಿನಗಳು

(C) 25 ದಿನಗಳು (D) 26 ದಿನಗಳು

**37.** ಈ ಕೆಳಗಿನ ಸರಣಿಯನ್ನು ಪೂರ್ತಿಗೊಳಿಸಿ :

132, 182, 306, 380, 552, 870, ___

(A) 930 (B) 992

(C) 1010 (D) 1142

**38.** PURCHASE ನ್ನು ಸಂಕೇತ ಬಳಸಿ PRHSEACU ಎಂದು ಬರೆದರೆ, SUITABLE ನ್ನು ಸಂಕೇತ ಬಳಸಿ ಹೇಗೆ ಬರೆಯಬಹುದು ?

(A) SIAELBTU (B) SIALBETU

(C) SIABELTU (D) SIALEBTU

**39.** 7 ಸೇಬುಗಳ ಬೆಲೆ 3 ಕಲ್ಲಂಗಡಿಗಳ ವೆಚ್ಚಕ್ಕೆ ಸಮವಾಗಿರುತ್ತದೆ. 2 ಕಲ್ಲಂಗಡಿಗಳ ಬೆಲೆ ಒಂದು ಸೇಬು ಮತ್ತು 5 ಕಿತ್ತಳೆಯ ವೆಚ್ಚಕ್ಕೆ ಸಮವಾಗಿರುತ್ತದೆ. ನಿಮ್ಮ ಹತ್ತಿರ 30 ಕಿತ್ತಳೆಯನ್ನು ಖರೀದಿಸಲು ಸಾಕಷ್ಟು ಹಣವಿದ್ದರೆ, ನೀವು ಎಷ್ಟು ಸೇಬುಗಳನ್ನು ಇದೇ ಹಣದಲ್ಲಿ ಖರೀದಿಸಬಹುದು ?

(A) 22 (B) 25

(C) 30 (D) 32

**40.** 'A' ಒಂದು ವೃತ್ತಾಕಾರದ ಮೈದಾನದಲ್ಲಿ ಗಂಟೆಗೆ ಒಂದು ಸುತ್ತಿನ ವೇಗದಲ್ಲಿ ಕ್ರಮಿಸಬಲ್ಲನು, 'B' ಗಂಟೆಗೆ ಆರು ಸುತ್ತುಗಳನ್ನು ಒಂದು ಗಂಟೆಯಲ್ಲಿ ಕ್ರಮಿಸಬಲ್ಲನು. ಅವರು 7.30 A.M.ಕ್ಕೆ ಅದೇ ಪಾಯಿಂಟ್‌ನಿಂದ ಒಂದೇ ದಿಕ್ಕಿನಲ್ಲಿ ಕ್ರಮಿಸಲು ಆರಂಭಿಸಿದರು. ಅವರು ಮೊದಲಿಗೆ ಪರಸ್ಪರ ದಾಟಿದರು

(A) 8.30 A.M. (B) 8.10 A.M.

(C) 7.48 A.M. (D) 7.42 A.M

**32.** In the following question a statement is followed by two assumptions (i) and (ii). An assumption is something supposed or taken for granted. Consider the statement and the following assumptions and decide which of the following assumptions is implicit in the statement ?

**Statement :** If it does not rain throughout this season, most farmers would be in trouble this year.

**Assumptions :**

i. Most farmers are generally dependent on rains.

ii. Timely rainfall is essential for farming.

(A) Only assumption (i) is implicit

(B) Only assumption (ii) is implicit

(C) Neither assumption (i) nor (ii) is implicit

(D) Both the assumptions are implicit

**33.** Consider the following statements.

1. All contemporaries are ancestors.
2. Few ancestors are heirs.
3. No contemporary is an heir.

Which of the following inference can be drawn from the above statements ?

(A) Some contemporaries are heirs

(B) Some heirs are ancestors

(C) No ancestor is a contemporary

(D) No heir is an ancestor

**34.** Choose the pair of words which shows the same relationship as given at the top.

Biography : Autobiography : : ?

(A) Memories : History

(B) Author : Performer

(C) Mobile : Automobile

(D) Testimony : Confession

**35.** Among the four terms marked A – D, three terms are similar and one is dissimilar. Find the one that is not similar.

(A) Shehnai (B) Flute

(C) Trumpet (D) Violin

**36.** A, B and C together can complete a piece of work in 10 days. All the three started working at it together and after 4 days 'A' left. Then B and C together completed the work in 10 more days. 'A' alone can complete the work in

(A) 15 days (B) 16 days

(C) 25 days (D) 26 days

**37.** Complete the series :

132, 182, 306, 380, 552, 870, ____

(A) 930 (B) 992

(C) 1010 (D) 1142

**38.** If PURCHASE is coded as PRHSEACU, then how SUITABLE will be coded ?

(A) SIAELBTU (B) SIALBETU

(C) SIABELTU (D) SIALEBTU

**39.** The price of 7 apples is equal to the cost of 3 melons. The price of 2 melons is equal to the cost of an apple and five oranges. If you had just enough money to buy 30 oranges, then how many apples you would buy with the same amount ?

(A) 22 (B) 25

(C) 30 (D) 32

**40.** 'A' walks around a circular field at the rate of one round per hour, while 'B' runs around it at the rate of six rounds per hour. They start in the same direction from the same point at 7.30 A.M. They shall first cross each other at

(A) 8.30 A.M. (B) 8.10 A.M.

(C) 7.48 A.M. (D) 7.42 A.M.

**41.** ಸಂಶೋಧನಾ ಪ್ರಾಕ್‌ಕಲ್ಪನೆಯು ಒಂದು

(A) ಸಿದ್ಧಾಂತ

(B) ತತ್ವ

(C) ತಾತ್ಕಾಲಿಕ ಪ್ರಮೇಯ

(D) ಸ್ವಯಂ ಸಿದ್ಧಾಂತ

**42.** ವಿಶ್ವಕೋಶದಲ್ಲಿ ಸಂಪಾದಿಸಿರುವ ವಿಷಯವನ್ನು ಏನೆಂದು ಕರೆಯುತ್ತಾರೆ ?

(A) ಪ್ರಾಥಮಿಕ ಮೂಲಾಂಶವಾಗಿದೆ

(B) ಅನಂತ ಮೂಲಾಂಶವಾಗಿದೆ

(C) ನಿರಂತರ ಮೂಲಾಂಶವಾಗಿದೆ

(D) ದ್ವಿತೀಯ ಮೂಲಾಂಶವಾಗಿದೆ (ಆನುಷಂಗಿಕ)

**43.** ಈ ಕೆಳಗಿನ ಯಾವ ಪ್ರಕ್ರಿಯೆಯು ಪ್ರಯೋಗಾತ್ಮಕ ಸಂಶೋಧನೆಗೆ ಅನಾವಶ್ಯಕವಾಗಿದೆ ?

(A) ವ್ಯತ್ಯಾಸಗೊಳಿಸುವುದು ಮತ್ತು ಪುನರಾವರ್ತನೆ

(B) ನಿಯಂತ್ರಿಸುವುದು

(C) ಅವಲೋಕನ

(D) ಪ್ರಯೋಗಾತ್ಮಕ ಗುಂಪು ಇಲ್ಲದಿರುವುದು

**44.** ಒಂದೇ ಮೂಲ ಗ್ರಂಥಕ್ಕೆ ಸಂಬಂಧಿಸಿದ ಎರಡು ಅಥವಾ ಹೆಚ್ಚು ಅನುಕ್ರಮ ಅಡಿಟಿಪ್ಪಣಿಗಳನ್ನು ಕೊಡುವಾಗ ಈ ಕೆಳಗಿನವುಗಳಲ್ಲಿ ಯಾವುದನ್ನು ಬಳಸಲಾಗುತ್ತದೆ ?

(A) ibid (B) et.al

(C) op.cit (D) loc.cit

**45.** ತತ್‌ಕ್ಷಣ ಅನುಷ್ಠಾನಗೊಳಿಸುವ ಉದ್ದೇಶದಿಂದ ಕೈಗೆತ್ತಿಕೊಳ್ಳಲಾದ ಸಂಶೋಧನೆಯನ್ನು ಹೀಗೆ ಗುರುತಿಸಲಾಗುತ್ತದೆ

(A) ಕ್ರಿಯಾ ಸಂಶೋಧನೆ

(B) ಕಾರ್ಯಕ್ಷೇತ್ರ ಸಂಶೋಧನೆ

(C) ಪರಿಕಲ್ಪನಾತ್ಮಕ ಸಂಶೋಧನೆ

(D) ಮೂಲಭೂತ ಸಂಶೋಧನೆ.

**46.** ಇವುಗಳಲ್ಲಿ ಯಾವುದು ಒಂದು ಪ್ರಸ್ತುತ ದಿನಗಳಲ್ಲಿ ಅತ್ಯಂತ ಪರಿಣಾಮಕಾರಿಯಾದ ಕಲಿಕಾ ವಿಧಾನವಾಗಿದೆ ?

(A) ಸ್ವಯಂ–ಅಧ್ಯಯನ

(B) ಮಿಶ್ರಿತ ಕಲಿಕೆ

(C) ಮುಖಾ–ಮುಖಿ ಕಲಿಕೆ

(D) ವಿದ್ಯುನ್ಮಾನ ಕಲಿಕೆ

**47.** ಇವುಗಳಲ್ಲಿ ಯಾವುದು ಮೌಲ್ಯಯುತ ಶಿಕ್ಷಣದ ಗುರಿಯಾಗಿದೆ ?

(A) ನೈತಿಕ ಮೌಲ್ಯಗಳನ್ನು ಅಂತರ್ಗತಗೊಳಿಸುವುದು

(B) ಸಾಮಾಜಿಕ ಮೌಲ್ಯಗಳನ್ನು ಅಂತರ್ಗತಗೊಳಿಸುವುದು

(C) ರಾಜಕೀಯ ಮೌಲ್ಯಗಳನ್ನು ಅಂತರ್ಗತಗೊಳಿಸುವುದು

(D) ಆರ್ಥಿಕ ಮೌಲ್ಯಗಳನ್ನು ಅಂತರ್ಗತಗೊಳಿಸುವುದು

**48.** ____________ ಕಲಿಕೆಯಲ್ಲಿ ಉಪನ್ಯಾಸವು ಒಂದು ಕನಿಷ್ಠ ಪರಿಣಾಮಕಾರಿಯಾಗಿದೆ.

(A) ಮನೋಧೋರಣೆ (B) ಮನೋಭಾವನೆ

(C) ಸಂಬಂಧಗಳು (D) ಕೌಶಲ್ಯ

**49.** ಒಬ್ಬ ಶಿಕ್ಷಕನು ಬೋಧನೆಗಾಗಿ ಈ ಕೆಳಗಿನ ಯಾವ ತಂತ್ರಗಳನ್ನು ಬಳಸುತ್ತಾನೆ ?

1. ಉಪನ್ಯಾಸ
2. ಪರಸ್ಪರ ವಿಚಾರ ವಿನಿಮಯ ಮಾದರಿ ಉಪನ್ಯಾಸ
3. ತಂಡ ಕಾರ್ಯ
4. ಸ್ವಅಧ್ಯಯನ

**ಸಂಕೇತಗಳು :**

(A) 1, 2, 3 ಮತ್ತು 4 (B) 1, 2, 3 ಮಾತ್ರ

(C) 1ಮತ್ತು 2 ಮಾತ್ರ (D) 1, 3 ಮತ್ತು 4

**50.** ಕೆಳಗಿನವುಗಳಲ್ಲಿ ಯಾವುದು ಉಪನ್ಯಾಸದ ಮಾದರಿಯಲ್ಲ ?

(A) ಬಝ್‌ಗುಂಪು (B) ಮಿದುಳು ದಾಳಿ

(C) ಗಾಳಿಮಾತು (D) ಮಾದರಿ ಪಾತ್ರ

**41.** A research hypothesis is a

(A) Theory

(B) Principle

(C) Tentative proposition

(D) Postulate

**42.** What is Encyclopaedia edited content called as ?

(A) Primary Source

(B) Infinite Source

(C) Continuous Source

(D) Secondary Source

**43.** Which is the process not needed in experimental research ?

(A) Manipulation and Replication

(B) Controlling

(C) Observation

(D) Absence of treatment group

**44.** When two or more successive footnotes refer to the same work, which one of the following is used ?

(A) ibid (B) et.al

(C) op.cit (D) loc.cit

**45.** What is the research that aims at immediate application ?

(A) Action Research

(B) Empirical Research

(C) Conceptual Research

(D) Fundamental Research

**46.** Which one of the following is the most effective mode of learning in the present days ?

(A) self-study

(B) blended learning

(C) face to face learning

(D) e-learning

**47.** Which one of the following is the aim of Value Education ?

(A) to inculcate moral values

(B) to inculcate social values

(C) to inculcate political values

(D) to inculcate economic values

**48.** Lecture method is least effective in the learning of the following

(A) Aptitudes (B) Attitudes

(C) Relationships (D) Skill

**49.** Which of the following techniques used by a teacher to teach include ?

1. Lecture
2. Interactive lecture
3. Group work
4. Self-study

**Codes :**

(A) 1, 2, 3 and 4 (B) 1, 2, 3 only

(C) 1 and 2 only (D) 1, 3 and 4

**50.** Which of the following is not a teaching method ?

(A) Buzz group (B) Brain storming

(C) Gossip (D) Role plays

ಚಿತ್ತು ಬರಹಕ್ಕಾಗಿ ಸ್ಥಳ

Space for Rough Work